# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 766 (756) |
| 2. | ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | : | 20-09-2022 |
| 4. | ಉತ್ತರಿಸುವವರು | : | ಮಾನ್ಯ ನಗರಾಭಿವೃದ್ಧಿ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಲ್ಲಿ ಬೆಳಗಾವಿ ಮಹಾನಗರ ಪಾಲಿಕೆಗೆ 24X7 ನೀರು ಸಂಪರ್ಕ ಕಲ್ಪಿಸಲು ಬಿಡುಗಡೆಯಾದ ಅನುದಾನವೆಷ್ಟು;</td><td>ಕಳೆದ ಮೂರು ವರ್ಷಗಲ್ಲಿ ಬೆಳಗಾವಿ ಮಹಾನಗರ ಪಾಲಿಕೆಗೆ ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ – (ಕೆಯುಡಬ್ಲ್ಯೂಎಸ್‌ಎಂಪಿ) ಯಲ್ಲಿ ಬೆಳಗಾವಿ, ಕಲಬುರಗಿ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗಳ ವ್ಯಾಪ್ತಿ ಪ್ರದೇಶಗಳಿಗೆ ವಿನ್ಯಾಸ-ನಿರ್ಮಾಣ-ಕಾರ್ಯಾಚರಣೆ- ವರ್ಗಾವಣೆ (DBOT) ಮಾದರಿಯಲ್ಲಿ ಪರಿಣಾಮಕಾರಿ ವೆಚ್ಚದೊಳಗೆ ನಿರಂತರ (24x7) ಒತ್ತಡ ಸಹಿತ ನೀರು ಸರಬರಾಜು ವ್ಯವಸ್ಥೆಯ ಸುಸ್ಥಿರ ಉನ್ನತ್ತೀಕರಣ ಯೋಜನೆಯನ್ನು ಸರ್ಕಾರಿ ಆದೇಶ ಸಂಖ್ಯೆ: ನಅಇ 279 ಪಿಆರ್ ಜೆ 2018 ಬೆಂಗಳೂರು 22.10.2018 ರಂತೆ ಅನುಷ್ಠಾನಗೊಳಿಸಲಾಗುತ್ತಿದೆ. ವಿಶ್ವಬ್ಯಾಂಕಿನ ನೆರವು ಶೇ.67ರಷ್ಟು (ರೂ.1209.00 ಕೋಟಿ) ಇರುತ್ತದೆ. ರಾಜ್ಯ ಸರ್ಕಾರದ ಪಾಲು ಶೇ.7 ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಪಾಲು ಶೇ.26% ರಾಗಿರುತ್ತದೆ.<br><br>ಸದರಿ ಯೋಜನೆಗೆ ಪ್ರತ್ಯೇಕ ನಗರವಾರು ಅನುದಾನ ಬಿಡುಗಡೆಯಾಗಿರುವುದಿಲ್ಲ ಆದರೆ ಯೋಜನಾ ನಗರಗಳಾದ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಕಲಬುರಗಿ ನಗರಗಳಿಗೆ ಸರ್ಕಾರದಿಂದ ಒಟ್ಟಾರೆಯಾಗಿ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನದ ವಿವರಗಳು ಈ ಕೆಳಕಂಡಂತಿರುತ್ತದೆ.<br><br>ರೂ.ಕೋಟಿಗಳಲ್ಲಿ)
<table>
<tr><th>ಕ್ರ. ಸಂ</th><th>ಆರ್ಥಿಕ ವರ್ಷ</th><th>ಮಂಜೂರಾಗಿರುವ ಅನುದಾನ</th><th>ಬಿಡುಗಡೆ ಯಾಗಿರುವ ಮೊತ್ತ</th></tr>
<tr><td>1</td><td>2020-21</td><td>80.00</td><td>233.60</td></tr>
<tr><td>2</td><td>2021-22</td><td>400.00</td><td>352.39</td></tr>
<tr><td>3</td><td>2022-23</td><td>400.00</td><td>0.00</td></tr>
</table>
ಈ ಪೈಕಿ ಬೆಳಗಾವಿ ಯೋಜನೆಗೆ ಜೂನ್-2020 ರಿಂದ ಆಗಸ್ಟ್-2022 ರವರೆಗೆ ನಿರ್ಮಾಣ (CAPEX) ವೆಚ್ಚ ರೂ.95.16 ಕೋಟಿಗಳು ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣೆಯ ವೆಚ್ಚ (OPEX) ರೂ.22.92 ಕೋಟಿಗಳು ಸೇರಿ ಒಟ್ಟು ರೂ.118.08 ಕೋಟಿಗಳು ವೆಚ್ಚವಾಗಿರುತ್ತದೆ.</td></tr>
</table>

| | | |
|---|---|---|
| ಆ) | ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯ ಎಷ್ಟು ವಾರ್ಡ್-ಗಳಲ್ಲಿ 24X7 ನೀರು ಸಂಪರ್ಕ ಕಲ್ಪಿಸಲಾಗಿದೆ: ಎಷ್ಟು ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ? (ವಾರ್ಡ್-ವಾರು ಮಾಹಿತಿ ನೀಡುವುದು. | ಬೆಳಗಾವಿ ಮಹಾನಗರ ಪಾಲಿಕೆಯ ಪ್ರಾತ್ಯಾಕ್ಷಿಕ ವಲಯಗಳ ವ್ಯಾಪ್ತಿಯ (ಪರಿಷ್ಕೃತ ವಾರ್ಡ ಗಳ ವಿಂಗಡಣೆಯಂತೆ) 04 ಪೂರ್ಣ ಹಾಗೂ 10 ಭಾಗಶಃ ವಾರ್ಡಗಳಿಗೆ ಈಗಾಗಲೇ 24x7 ನಿರಂತರ ನೀರು ಸರಬರಾಜು ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದ್ದು, ವಾರ್ಡ ಗಳ ವಿವರ ಈ ಕೆಳಗಿನಂತೆ.<br>1. ಬೆಳಗಾವಿ (ಉತ್ತರ) ವಾರ್ಡ್ ಗಳ ಸಂಖ್ಯೆ : 18 & 34 (ಪೂರ್ಣ) ಮತ್ತು 19, 17, 25, 26, 33 & 45 (ಭಾಗಶಃ).<br>2. ಬೆಳಗಾವಿ (ದಕ್ಷಿಣ) ವಾರ್ಡ್ಗಳ ಸಂಖ್ಯೆ : 42 & 52 (ಪೂರ್ಣ) ಮತ್ತು : 41, 43, 51 & 57 (ಭಾಗಶಃ).<br>• ಬೆಳಗಾವಿ (ಉತ್ತರ) ವಾರ್ಡಗಳಲ್ಲಿ 5758 ಮನೆಗಳಿಗೆ 24x7 ನೀರಿನ ಸಂಪರ್ಕ ಕಲ್ಪಿಸಲಾಗಿದೆ.<br>• ಬೆಳಗಾವಿ (ದಕ್ಷಿಣ) ವಾರ್ಡಗಳಲ್ಲಿ 5596 ಮನೆಗಳಿಗೆ 24x7 ನೀರಿನ ಸಂಪರ್ಕ ಕಲ್ಪಿಸಲಾಗಿದೆ.<br><br>ಒಟ್ಟು 11354 ಮನೆಗಳಿಗೆ 24x7 ನೀರಿನ ಸಂಪರ್ಕ ಕಲ್ಪಿಸಲಾಗಿದೆ. ವಿಶ್ವಬ್ಯಾಂಕ್ ನೆರವಿನಡಿಯಲ್ಲಿ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ (ಕೆಯುಡಬ್ಲ್ಯೂಎಸ್ಎಂಪಿ) ಯಲ್ಲಿ 24x7 ನಿರಂತರ ನೀರು ಸರಬರಾಜು ಸೌಲಭ್ಯವನ್ನು ಉಳಿದ ಎಲ್ಲಾ ವಾರ್ಡ್‌ಗಳಲ್ಲಿ ಸುಮಾರು 85000 ಮನೆಗಳಿಗೆ ಹಂತಹಂತವಾಗಿ ಯೋಜನೆಯ ವಿನ್ಯಾಸ ಮತ್ತು ನಿರ್ಮಾಣ ಅವಧಿಯಲ್ಲಿ ಕಲ್ಪಿಸಲು ಉದ್ದೇಶಿಸಲಾಗಿದೆ. |

ಕಡತ ಸಂಖ್ಯೆ: ನಅಇ 137 ಪಿ.ಆರ್.ಜೆ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು.

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು